6. Adireddypally
7. Narayanapally

ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆ.

(1007)ಶ್ರೀ ಜಿ.ರಾಜುಗೌಡ (ಹನೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ 1986 ರಿಂದ 1991ರವರೆಗೆ ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗಾಗಿ ನಿಗದಿಪಡಿಸಿರುವ ಗುರಿ ಎಷ್ಟು;

ಆ ಬೆಂಗಳೂರು ಸುತ್ತ ಮುತ್ತ ಎಷ್ಟು ಕಿ.ಮೀ. ವರೆವಿಗೆ ನಾಲ್ಕು ವಾಹನಗಳು ಏಕ ಕಾಲದಲ್ಲಿ ಚಲಿಸಲು ಅನುಕೂಲವಾಗುವಂತಹ ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿದೆ ;

ಇ ಇದಕ್ಕೆ ತಗಲುವ ವೆಚ್ಚವೆಷ್ಟು;

ಈ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ರಾಜ್ಯಕ್ಕೆ ನೀಡಿರುವ ನೆರವು ಎಷ್ಟು?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ 1986 ರಿಂದ 1991ರವರೆಗೆ ಕೇಂದ್ರ ವಿಭಾಗದ ಅಡಿಯಲ್ಲಿ 3500-00 ಕೋಟಿ ರೂ.ಗಳನ್ನು ಅಖಿಲ ಭಾರತ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ನಿಗದಿಪಡಿಸಲಾಗಿದೆ. ರಾಜ್ಯವಾರು ಹಂಚಿಕೆ ನಿಗದಿಪಡಿಸಿಲ್ಲ. ಆದರೆ ಕೇಂದ್ರ ಸರ್ಕಾರವು ರೂ. 110 ಕೋಟಿಯನ್ನು ರಾಜ್ಯದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಈ 5 ವರ್ಷದಲ್ಲಿ ಕೊಟ್ಟಿದೆ.

ಆ ಬೆಂಗಳೂರು ಪೂನಾ ರಸ್ತೆಯಲ್ಲಿ ಬೆಂಗಳೂರಿನಿಂದ 20 ಕಿ.ಮೀ. ಉದ್ದದವರೆಗೆ (ಕಿ.ಮೀ 10 ರಿಂದ30) ರಸ್ತೆಯನ್ನು 4 ಪಥ ರಸ್ತೆಯನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರವು ಮಂಜೂರು ಮಾಡಿದ್ದು ಕೆಲಸವು ಪೂರ್ಣವಾಗಿದೆ.

ಇ ಇದಕ್ಕೆ 547.33 ಲಕ್ಷ ರೂ.ಗಳ ಖರ್ಚಾಗಿದೆ.

ಈ ರಾಜ್ಯದಲಿ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ 79.78 ಕೋಟಿ ರೂ.ಗಳು ಹಾಗೂ ನಿರ್ವಹಣೆಗೆ 29.92 ಕೋಟಿ ರೂ.ಗಳನ್ನು 1986-1991 ರಲ್ಲಿ ರಾಜ್ಯಕ್ಕೆ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳು.

(1955)ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ):- ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ಭಾಗಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಮಾಡಬಹುದೆಂದು ತಜ್ಞರು ಅಭಿಪ್ರಾಯ. ಪಟ್ಟಿದ್ದಾರೆ ;

ಆ ಇದರ ಪೈಕಿ ಸರ್ಕಾರ ಕಳೆದ 2ವರ್ಷಗಳಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದೆ ;

ಇ ಇದರಲ್ಲಿ ಎಷ್ಟು ಕಾರ್ಯಗತವಾಗಿದೆ, ಎಷ್ಟು ಕಾರ್ಯಗತವಾಗುವ ಅಂಚಿನಲ್ಲಿವೆ ;

ಈ ಇದಕ್ಕಾಗಿ ಮುಂಗಡ ಪತ್ರದಲ್ಲಿ ಮೀಸಲಾಗಿಟ್ಟಿದ್ದ ಹಣವೆಷ್ಟು ;

ಉ ಇದರಲ್ಲಿ ಬಿಡುಗಡೆಯಾದ ಹಣ ಹಾಗೂ ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು, (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಮೂರು ಸ್ಥಳಗಳಲ್ಲಿ ಏತನೀರಾವರಿ ಯೋಜನೆಗಳನ್ನು ಮಾಡಬಹುದೆಂದು ಅಭಿಪ್ರಾಯ ಪಡಲಾಗಿದೆ.

1. ಯಲ್ಲಾಪುರ ತಾಲ್ಲೂಕಿನ ಬಸಲೇಬೈಲ
2. ಸುಪಾ ತಾಲ್ಲೂಕಿನ ರಾಮನಗರ
3. ಕುಮಟಾ ತಾಲ್ಲೂಕಿನ ಶಿರಕುಂಜಿ.

ಆ ಯಾವುದೂ ಇಲ್ಲ.

ಇ ಯಾವುದೇ ಯೋಜನೆಯನ್ನು ಇನ್ನೂ ಕಾರ್ಯಗತಗೊಳಿಸಿಲ್ಲ.

ಈ ಏತ ನೀರಾವರಿ ನಿಗಮದಿಂದ ಕೈಗೊಳ್ಳುವ ಪ್ರತಿ ಮುಂಗಡ ಪತ್ರದಲ್ಲಿ ಹಣವನ್ನೂ ಮೀಸಲಾಗಿ ಇಟ್ಟಿರುವುದಿಲ್ಲ. ಈ ಯೋಜನೆಗಳಿಗೆ ಹಣಕಾಸು ಸಂಸ್ಥೆಗಳಿಂದ ಅಂದಾಜು ಮೊಬಲಿಗಿನ ಪ್ರತಿಶತ 75 ರಷ್ಟು ಸಾಲ ಸೌಲಭ್ಯ ಪಡೆದುಕೊಂಡ ನಂತರ, ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಉ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳು

(2077)ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ):- , ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಇರುವ ಸರ್ಕಾರಿ ಕಛೇರಿಗಳ ಸಂಖ್ಯೆ ಎಷ್ಟು ? (ಪ್ರತ್ಯೇಕ ಇಲಾಖಾವಾರು ವಿವರಗಳೊಡನೆ);

ಆ ಬೆಂಗಳೂರು ನಗರದಲ್ಲಿ ಖಾಸಗಿ ಕಟ್ಟಡಗಳಲ್ಲಿ ಇರುವ ಸರ್ಕಾರಿ ಕಛೇರಿಗಳಿಗೆ ಸರ್ಕಾರ ಪ್ರತಿ ತಿಂಗಳು ಪಾವತಿ ಮಾಡುತ್ತಿರುವ ಬಾಡಿಗೆ ಎಷ್ಟು?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ 95 ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡದಲ್ಲಿರುತ್ತವೆ. (ವಿವರಗಳನ್ನು ಅನುಬಂಧ 'ಅ' ದಲ್ಲಿ ನೀಡಿರುತ್ತೆ)

ಆ ಮಾಹೆಯಾನ ಒಟ್ಟು 3,95, 261 ರೂ.ಗಳು (ವಿವರ ಅನುಬಂಧ 'ಅ' ರಲ್ಲಿ ನೀಡಿರುತ್ತೆ)

ಅನುಬಂಧ-ಅ

ಬೆಂಗಳೂರು ನಗರದಲ್ಲಿ ಸರ್ಕಾರಿ ಕಛೇರಿಗಳು ಖಾಸಗೀ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವರಗಳು.

ಕ್ರ.ಸಂ.	ಇಲಾಖೆಗಳು	ಕಛೇರಿಗಳ ಸಂಖ್ಯೆ	ತಿಂಗಳ ಬಾಡಿಗೆ ರೂ.ಗಳಲ್ಲಿ
1.	ಪೋಲೀಸ್ ಇಲಾಖೆ	19	32, 148